# ಶ್ರೀ ಕೊರಗಜ್ಜ ಕ್ಷೇತ್ರ

ಉರ್ವ, ಬೋಳೂರು



18ನೇ ವಾರ್ಷಿಕ

# ನೇಮೋತ್ಸವ

ದಿನಾಂಕ 20-04-2024ನೇ ಶನಿವಾರದಿಂದ
ದಿನಾಂಕ 21-04-2024ನೇ ರವಿವಾರ

**ಆತ್ಮೀಯ ಕರೆಯೋಲೆ**

# ಶ್ರೀ ಕೊರಗಜ್ಜ ಕ್ಷೇತ್ರ



ಸ್ವಸ್ತಿ ಶ್ರೀ ಕ್ರೋಧಿ ನಾಮ ಸಂವತ್ಸರದ ಚೈತ್ರ ಶುದ್ಧ ೧೦
ಮೇಷ ಮಾಸ ದಿನೆ ೫ ನೇ

**ದಿನಾಂಕ 18-04-2024ನೇ ಗುರುವಾರದಿಂದ ಮೊದಲ್ಗೊಂಡು**
**ದಿನಾಂಕ 21-04-2024ನೇ ರವಿವಾರ ಪರ್ಯಂತ**

ಉರ್ವ ಬೋಳೂರು ಶ್ರೀ ಕೊರಗಜ್ಜ ಕ್ಷೇತ್ರದಲ್ಲಿ

## 18ನೇ ವಾರ್ಷಿಕ ನೇಮೋತ್ಸವಕ್ಕೆ

ತಾವೆಲ್ಲರೂ ಬಂದು ತನು-ಮನ-ಧನಗಳಿಂದ ಸಹಕರಿಸಿ,
ಶ್ರೀ ದೈವಗಳ ಸಿರಿಮುಡಿ ಗಂಧ ಪ್ರಸಾದ ಸ್ವೀಕರಿಸಿ, ಶ್ರೀ ಕೊರಗಜ್ಜನ ಅನುಗ್ರಹಕ್ಕೆ ಪಾತ್ರರಾಗಿ,
ಈ ನೇಮೋತ್ಸವವನ್ನು ಚಂದಗಾಣಿಸಿಕೊಡಬೇಕಾಗಿ ವಿನಂತಿಸುವ,

**ಶ್ರೀ ಕೊರಗಜ್ಜ ಕ್ಷೇತ್ರ ಶ್ರೀ ರಾಮ ಭಜನಾ ಮಂದಿರ ಮತ್ತು ಹತ್ತು ಸಮಸ್ತರ ಪರವಾಗಿ**
**ಅಧ್ಯಕ್ಷರು ಮತ್ತು ಸರ್ವಸದಸ್ಯರು**

## ಕಾರ್ಯಕ್ರಮಗಳು

**ತಾರೀಕು 18-04-2024 ಗುರುವಾರ**

ಬೆಳಿಗ್ಗೆ 09.00ಕ್ಕೆ : ಪ್ರಾರ್ಥನೆ, ಪುಣ್ಯಾಹ, ಗಣಹೋಮ, ನವಕ ಕಲಶ, ಪರ್ವ ಪೂಜೆ<br>
ವೇ। ಮೂ। ಶ್ರೀ. ಕೆ. ಪುರುಷೋತ್ತಮ ಭಟ್<br>
(ಶ್ರೀ ವೆಂಕಟರಮಣ (ಶನಿವಾರ) ದೇವಸ್ಥಾನ, ಬೊಕ್ಕಪಟ್ಣ ಮಂಗಳೂರು)<br>
ಇವರ ಪೌರೋಹಿತ್ಯದಲ್ಲಿ

**ತಾರೀಕು 19-04-2024 ಶುಕ್ರವಾರ**

ಬೆಳಿಗ್ಗೆ 08.30ಕ್ಕೆ : ಕ್ಷೇತ್ರದ ಪ್ರಧಾನ ದೈವ ಸಾರಲ ಪಟ್ಟದ ಕೊರಗಜ್ಜನಿಗೆ<br>
**ಸೀಯಾಳಾಭಿಷೇಕ** ನಂತರ ಪರ್ವ ಸೇವೆ, ಪ್ರಸಾದ ವಿತರಣೆ

**ತಾರೀಕು 20-04-2024 ಶನಿವಾರ**

ಸಂಜೆ 06.30ಕ್ಕೆ : ಶ್ರೀ ಚಾಮುಂಡೇಶ್ವರಿ-ಕತ್ತಲೆಕಾನ ಗುಳಿಗ ದೈವಗಳ<br>
**ಸಿರಿ ಸಿಂಗಾರದ ನೇಮೋತ್ಸವ**

ರಾತ್ರಿ 08.30ಕ್ಕೆ : **ಸಾರ್ವಜನಿಕ ಮಹಾ ಅನ್ನಸಂತರ್ಪಣೆ**, ಗಂಧ ಪ್ರಸಾದ ವಿತರಣೆ



**ತಾರೀಕು 21-04-2024 ಆದಿತ್ಯವಾರ**

ರಾತ್ರಿ 07.00ಕ್ಕೆ : ಕ್ಷೇತ್ರದ ಪ್ರಧಾನ ದೈವ ಸಾರಲ ಪಟ್ಟದ ಕೊರಗಜ್ಜನಿಗೆ<br>
**ದೊಂದಿ ಬೆಳಕಿನ (ತುಡರ ಕೋಲ)** ಸೇವೆ ನಡೆಯಲಿದೆ.<br>
ನಂತರ ಅಗೇಲು ಸೇವೆ - ಗಂಧ ಪ್ರಸಾದ ವಿತರಣೆ

ರಾತ್ರಿ 08.30ಕ್ಕೆ : **ಸಾರ್ವಜನಿಕ ಮಹಾ ಅನ್ನಸಂತರ್ಪಣೆ**

ಆತ್ಮೀಯ ಭಗವದ್‌ಭಕ್ತರೇ ಈ ಎಲ್ಲಾ ಕಾರ್ಯಕ್ರಮಕ್ಕೆ ತಮ್ಮನ್ನು ಪ್ರೀತಿಪೂರ್ವಕ ಸ್ವಾಗತಿಸುತ್ತಿದ್ದೇವೆ.

# PROGRAMS

**Date 18-04-2024 Thursday**

09.00 am : **Prayer, Punyaha, Ganahoma, Navaka Kalash, Parva Puja, Veda Moorthi Mr. K. Purushottam Bhatt's** priesthood (Sri Venkataramana Temple, Bokkapatna Mangalore)

**Date 19-04-2024 Friday**

08.30 am : **Seeyalabhisheka** to the presiding deity **Sarala Pattada Koragajja,** after that Parva Seva, Prasadam distribution

**Date 20-04-2024 Saturday**

06.30 PM : **Sirisingara Nemothsava to Sri Chamundeshwari-Kathalekana Guliga Daiva's**

08.30 pm : **Sarvajanika Annasantharpana followed by distribution of Gandha Prasada**



**Date 21-04-2024 Sunday**

07.00 pm : **Dondhi Belakina (Thudar Kola)** to the presiding deity **Sarala Pattada Koragajja,** after that **Agelu Seva, Gandha - Prasadam distribution**

08.30 pm : **Sarvajanika Annasantharpana**

Warm welcome to
dear Devotees for all this Program

# ಕ್ಷೇತ್ರ ಪರಿಚಯ – ವಿಜ್ಞಾಪನೆ



ತುಳುನಾಡಿನ ಅದೆಷ್ಟೋ ದೈವಗಳು ತಮ್ಮ ಕಾರ್ಣಿಕವನ್ನು ತೋರಿಸಿ ಪುಣ್ಯ ಕ್ಷೇತ್ರದಲ್ಲಿ ನೆಲೆ ನಿಂತು ಧರ್ಮ ತಪ್ಪಿ ನಡೆದವರಿಗೆ ತಕ್ಕ ಶಿಕ್ಷೆಯನ್ನು ನೀಡಿ ಬಳಲಿ ಬಂದ ಭಕ್ತರಿಗೆ ಅವರ ಕಷ್ಟಗಳನ್ನು ಪರಿಹರಿಸಿ ಕೊಟ್ಟಂತಹ ಕ್ಷೇತ್ರಗಳಲ್ಲಿ ಶ್ರೀ ಕೊರಗಜ್ಜ ಕ್ಷೇತ್ರ ಉರ್ವ ಬೋಳೂರು ಕೂಡಾ ಒಂದು. ಕ್ಷೇತ್ರದ ಪ್ರಧಾನ ಶಕ್ತಿ ಕೊರಗ ತನಿಯ ದೈವವೂ ಈ ಕ್ಷೇತ್ರದಲ್ಲಿ ನೆಲೆ ನಿಂತ ಪರಿಯನ್ನು ಶ್ರೀ ದೈವದ ನುಡಿಕಟ್ಟು ಹಾಗೂ ಪಾರ್ದನದ ಮೂಲಕ ತಿಳಿದು ಬರುತ್ತದೆ.

ಪಣಂಬೂರು ಪಟ್ಟ ಸಾಲೆಯಲ್ಲಿ ಓರವನ ಓಡಿ ಹಾಗೂ ಕೊರಪೊಳು ಮೈರೆ ದಂಪತಿಗಳಿಗೆ ಈಶ್ವರ ದೇವರ ಅಂಶ ಸಂಭೂತ ಮಗನಾಗಿ ಜನಿಸಿ ತನಿಯ ಎಂಬ ಹೆಸರಿನಲ್ಲಿ ತನ್ನನು ಕರೆಸಿಕೊಂಡು ಮಗು ಇದ್ದಾಗಲೇ ತಂದೆ– ತಾಯಿಯನ್ನು ಕಳೆದುಕೊಂಡು ತನ್ನ ವಂಶದ ಏಳು ಕೊಪ್ಪದ ಕೊರಗ ಸಮುದಾಯದವರು ಅಳಿದು ಹೋದರು ದಿಕ್ಕು ದೆಸೆ ಇಲ್ಲದ ಸಮಯದಲ್ಲಿ ಅತೀವ ದುಖಃದಿಂದ ತನ್ನ ಕೊಪ್ಪವನ್ನು ಬಿಡುವನು, ಕದ್ರಿಯ ಎನ್ನೂರ ಬರ್ಕೆ ಮೈರಕ್ಕೆ ಬೈದೆದಿಯವರಿಗೆ ಸಿಕ್ಕಿದಂತಹ ತನ್ನವರು ಯಾರೂ ಇಲ್ಲದ ಅನಾಥ ಮಗು ತನಿಯನನ್ನು, ತನ್ನ ಬರ್ಕೆಯಲ್ಲಿ ತನ್ನ ಮಕ್ಕಳ ಜೊತೆ ಇವನನ್ನು ತನ್ನ ಮಗನಂತೆ ಸಾಕಿದಳು.


ಸಮಯ ಕಳೆದಂತೆ ತನಿಯನು ದೊಡ್ಡವನಾಗಿ ತನ್ನ ಕುಲ ಜನ್ಮದ ಕೆಲಸವನ್ನು ಮಾಡುತ್ತಿದ್ದನು. ಮೈರಕ್ಕೆ ಬೈದೆದಿ ತನ್ನ ಮೂಲದ ದೈವಗಳಿಗೆ ಧರ್ಮ ನೇಮಕ್ಕೆ ಸೀಯಾಳ–ತಿರಿ–ಬಾಳೆ (ತೆಂಗಿನ ಎಳಾತ್ತು ಸೋಗೆ ಹಾಗೂ ಬಾಳೆ ದಿಂಡು) ಹೊರಲು ಕೆಲಸದ ಆಳು ಸಿಗದ ಸಮಯದಲ್ಲಿ ಏಳು ಮಂದಿ ಹೊರುವ ಹೊರೆಯನ್ನು ಒಬ್ಬನೇ ಹೊರುತ್ತೇನೆ ಎಂದು ಮೈರಕ್ಕೆ ಬೈದೆದಿಯಲ್ಲಿ ಹೇಳಿ ಹೊರೆ ಹೊತ್ತು ಹೋಗುತ್ತಾನೆ ನಂತರ ಕದ್ರಿಯ ಪುಣ್ಯ ಸನ್ನಿಧಿಯಲ್ಲಿ ಮೈರಕ್ಕೆಯ ಮೂಲದ ದೈವದ ಉಗ್ರ ದೃಷ್ಟಿಗೆ ತುತ್ತಾಗಿ ಕಾಯದ ದೇಹವನ್ನು ಬಿಟ್ಟು ಮಾಯದ ದೈವತ್ವ ಪಡೆದು ಕದ್ರಿ ಮಂಜುನಾಥ ದೇವರ ಪಾದಕ್ಕೆ ವಂದಿಸಿ ಬಡಗು ರಾಜ್ಯದ ದುರ್ದಿಷ್ಟೆ ಕಳೆಯಲು ಮಾಯಕದಲ್ಲಿ ಪಯಣ ಮಾಡುವಾಗ ಉರ್ವ ಬೋಳೂರಿನ ಸಮುದ್ರ ತಟ್ಟಕ್ಕೆ (ಈಗಿರುವ ಕೊರಗಜ್ಜ ಕ್ಷೇತ್ರಕ್ಕೆ) ಬಂದು ಕಿಂಕ್ಕಿನ (ಸಣ್ಣ) ಕಲ್ಲಿನಲ್ಲಿ ಕುಳಿತು ಉರ್ವ ಬೋಳೂರು ಮಾರಿಯಮ್ಮನಿಗೆ ಮಾಯದಲ್ಲಿ ಭೇಟಿ ಕೊಟ್ಟಂತಹ ಪುಣ್ಯ ಸನ್ನಿಧಿಯೇ ಶ್ರೀ ಕೊರಗಜ್ಜ ಕ್ಷೇತ್ರ ಉರ್ವ ಬೋಳೂರು.

ತದ ನಂತರ ಶ್ರೀ ದೈವವೂ ಕುತ್ತಾರು ಸಾರಾಲ ಪಟ್ಟಕ್ಕೆ ಹೋಗಿ ಸೋಮೇಶ್ವರದಲ್ಲಿ ಶ್ರೀಸೋಮನಾಥೇಶ್ವರನ ಭೇಟಿ ಮಾಡಿ ಕುತ್ತಾರು ಮೂರು ಗ್ರಾಮದ ಅರಸು ಸ್ಥಾನದಲ್ಲಿ ಇರುವ ಪಂಜಂದಾಯ, ಬಂಟ, ವೈದ್ಯನಾಥ ದೈವಗಳಲ್ಲಿಗೆ ಒಬ್ಬ ಪ್ರಧಾನಿ ಎಂದು ಕರೆಸಿ ಕುತ್ತಾರು ಮೂಲ ಸ್ಥಾನ ಎಂದು ಕರೆಯಿಸಿ ತುಳುನಾಡಿನ ಉದ್ದ ಅಗಲಕ್ಕೂ ಕೀರ್ತಿ ಮೆರೆಸಿದಂತಹ ಶಕ್ತಿ ಸ್ವಾಮಿ ಕೊರಗಜ್ಜ.

ಶ್ರೀ ಕ್ಷೇತ್ರದ ಕೊರಗಜ್ಜನಿಗೆ ಮುಂದಿನ ವರ್ಷ ದಿನಾಂಕ: 19–04–2025 ವಾರ್ಷಿಕ ನೇಮೋತ್ಸವದಂದು **"ಬಂಗಾರದ ಮುಟ್ಟಾಲೆ"**ಯನ್ನು ಸಮರ್ಪಿಸಲಾಗುವುದು ಈ ಪುಣ್ಯ ಕಾರ್ಯದಲ್ಲಿ ಸದ್ಭಕ್ತರಾದ ನೀವು ನಮ್ಮೊಂದಿಗೆ ಭಾಗಿಯಾಗಿ ಸ್ವಾಮಿ ಕೊರಗಜ್ಜನ ಕೃಪೆಗೆ ಪಾತ್ರರಾಗಬೇಕೆಂದು ವಿನಂತಿ.

"ಬಂಗಾರದ ಮುಟ್ಟಾಲೆ" ಸಮರ್ಪಣೆಗೆ ನೀವು ನೀಡುವ ನಗದು ಮತ್ತು ಪುತ್ಥಳಿ ಚಿನ್ನ (999) ವನ್ನು ಸ್ವೀಕರಿಸಲಾಗುವುದು.

## "ಬಂಗಾರದ ಮುಟ್ಟಾಲೆ"



**ಸಮರ್ಪಣೆಗೆ ನೀವು ನೀಡುವ ನಗದು ಮತ್ತು ಪುತ್ಥಳಿ ಚಿನ್ನ (999) ವನ್ನು ಸ್ವೀಕರಿಸಲಾಗುವುದು.**

**ನಮ್ಮ ಬ್ಯಾಂಕ್ ಖಾತೆ ಸಂಖ್ಯೆ:**

**Bank of Name : Sri Koragajja Kshethra Urwa Boloor**

**Bank of Baroda - A/c No: 73600100009234**

**IFSC : BARB0VJASDA (Fifth Character is Zero)**

**ಹೆಚ್ಚಿನ ಮಾಹಿತಿಗಾಗಿ: 9740549184, 7349549184**

ಆತ್ಮೀಯರೇ,

ದಿನಾಂಕ **19-04-2024**ನೇ ಶುಕ್ರವಾರ ಶ್ರೀ ಕ್ಷೇತ್ರದಲ್ಲಿ ಕೊರಗಜ್ಜನಿಗೆ ನಡೆಯುವ **ಸೀಯಾಳಾಭಿಷೇಕಕ್ಕೆ** ಸೀಯಾಳವನ್ನು ನೀಡುವ ಭಕ್ತರು ಒಂದು ದಿನ ಮುಂಚಿತವಾಗಿ ಕ್ಷೇತ್ರಕ್ಕೆ ತಂದು ಒಪ್ಪಿಸಲು ವಿನಂತಿ. ಅಭಿಷೇಕದ ನಂತರ ತೀರ್ಥ ಪ್ರಸಾದವನ್ನು ನೀಡಲಾಗುವುದು.

**ಅನ್ನಸಂತರ್ಪಣೆಗೆ ಹೊರೆಕಾಣಿಕೆಯನ್ನು ಸ್ವೀಕರಿಸಲಾಗುವುದು.**

**ವಿಶೇಷ ಸೂಚನೆ :**

**ಪ್ರತೀ ತಿಂಗಳ ಪ್ರಥಮ ಶನಿವಾರ ಶ್ರೀ ಚಾಮುಂಡೇಶ್ವರಿ ದರ್ಶನ ಸೇವೆ ಹಾಗೂ ತಿಂಗಳ ಪ್ರಥಮ ಆದಿತ್ಯವಾರ ಸಾಮೂಹಿಕ ಹರಕೆ ಕೋಲಸೇವೆ ಮತ್ತು ಪ್ರತೀ ತಿಂಗಳ ಕಡೇಯ ಶನಿವಾರ ಅಗೇಲು ಸೇವೆಯು ನಡೆಯುವುದು.**

ಕ್ಷೇತ್ರದ ಪ್ರತೀ ಕಾರ್ಯಕ್ರಮಕ್ಕೆ ನಮ್ಮೊಂದಿಗೆ ಉತ್ತಮ ಸಲಹೆ ಹಾಗೂ ತನು-ಮನ-ಧನದ ರೂಪದಲ್ಲಿ ಸಹಕರಿಸಿದ ಊರಿನ ಸರ್ವ ಧರ್ಮಾಭಿಮಾನಿಗಳ ಸೇವೆಯು ಕೊರಗಜ್ಜನ ಪಾದಕ್ಕೆ ಅರ್ಪಣೆಯಾಗಲಿ ಎಂದು ಪ್ರಾರ್ಥಿಸುತ್ತೇವೆ.

## ಕ್ಷೇತ್ರದಲ್ಲಿ ನಡೆಯುವ ಸೇವೆಗಳು

| | | |
|---|---|---|
| ಕೊರಗಜ್ಜನಿಗೆ ಹರಕೆಯ ಕೋಲ ಸೇವೆ | ರೂ. | 95,000.00 |
| ಸಾಮೂಹಿಕ ಹರಕೆ ಕೋಲ ಸೇವೆ | ರೂ. | 15,000.00 |
| ಒಂದು ತಿಂಗಳ ನಿತ್ಯ ಹೂವಿನ ಪೂಜೆ | ರೂ. | 2,500.00 |
| ಸಂಕ್ರಮಣದ ಸಂಪೂರ್ಣ ಸೇವೆ | ರೂ. | 1,501.00 |
| ದೈವಗಳಿಗೆ ಪರ್ವ ಸೇವೆ | ರೂ. | 1500.00 |
| ಕೊರಗಜ್ಜನಿಗೆ ಆಗೇಲು ಸೇವೆ | ರೂ. | 650.00 |
| ಹೂವಿನ ಅಲಂಕಾರ ಸೇವೆ (ಅಗೇಲು ಸಂದರ್ಭ) | ರೂ. | 501.00 |
| ಸಂಕ್ರಮಣದ ಹೂವಿನ ಅಲಂಕಾರ ಸೇವೆ | ರೂ. | 251.00 |
| ಶ್ರೀ ಚಾಮುಂಡಿ ಅಮ್ಮನಲ್ಲಿ ಪ್ರಶ್ನಾ ಚಿಂತನೆ (ಟೋಕನ್) | ರೂ. | 250.00 |
| ಸಂಕ್ರಮಣದ ವಿಶೇಷ ಪ್ರಾರ್ಥನೆ ಸೇವೆ | ರೂ. | 101.00 |

ನಮ್ಮ ಬ್ಯಾಂಕ್ ಖಾತೆ :

**CANARA Bank, Urwa Market Branch, Mangalore**

**S.B - A/c No: 110068990506**

**IFSCE Code: CNRB0001602**